ಪರಿಶೀಲನೆಯಲ್ಲಿದೆ. ಈ ಬಗ್ಗೆ ಸೂಕ್ತ ಸಮಯದಲ್ಲಿ ಪರಿಶೀಲಿಸಿ ಅವಶ್ಯಕ ಕ್ರಮ ಕೈಗೊಳ್ಳಲಾಗುವುದು.

ಸಂ:ಕಂಇ 141 ಬಿಎಂಎಂ 2012

ಹಾಸನ ವಿಮಾನ ನಿಲ್ದಾಣದ ಕಾಮಗಾರಿ ಕೈಗೊಳ್ಳುವುದು

86 : 168

ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)

ಅ) ಹಾಸನ ವಿಮಾನ ನಿಲ್ದಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡು 5 ವರ್ಷಗಳಾಗಿದ್ದರೂ ವಿಮಾನ ನಿಲ್ದಾಣದ ಕಾಮಗಾರಿಯನ್ನು ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆ) ಹಾಗಿದ್ದಲ್ಲಿ, ಹಾಸನ ವಿಮಾನ ನಿಲ್ದಾಣದ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು)

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಹಾಸನ ವಿಮಾನ ನಿಲ್ದಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ಇದುವರೆವಿಗೂ ಪೂರ್ಣಗೊಂಡಿರುವುದಿಲ್ಲ.

ಆ)

- ಈ ವಿಮಾನ ನಿಲ್ದಾಣವನ್ನು ಪಿಪಿಪಿ ಆಧಾರದ ಮೇಲೆ ನಿರ್ಮಿಸಲು ನಿರ್ಧರಿಸಿ ಇದಕ್ಕಾಗಿ M/s Jupiter Aviations and Logistics ರವರನ್ನು ಅಭಿವೃದ್ಧಿದಾರರನ್ನಾಗಿ ಆಯ್ಕೆ ಮಾಡಿದೆ.
- ಅಭಿವೃದ್ಧಿದಾರರೊಂದಿಗೆ ಯೋಜನಾ ಅಭಿವೃದ್ಧಿ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.
- ವಿಮಾನ ನಿಲ್ದಾಣ ಪ್ರದೇಶಕ್ಕೆ 250 ಮೀ. ಉದ್ದದ ಕಾಂಪೌಂಡನ್ನು ನಿರ್ಮಿಸಿದೆ.
- ಯೋಜನೆಗೆ ಕೇಂದ್ರ ಸರ್ಕಾರದ ಪರಿಸರ ಇಲಾಖೆಯಿಂದ ತೀರುವಳಿ ಪಡೆದಿದೆ.
- ಕರ್ನಾಟಕ ಸರ್ಕಾರದ ಪರಿಸರ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತೀರುವಳಿ ಪಡೆದಿದೆ.

- ಹಾಸನ ವಿಮಾನ ನಿಲ್ದಾಣಕ್ಕೆ ಸುಮಾರು 960 ಎಕರೆ ಜಮೀನಿನ ಅಗತ್ಯವಿದೆಯೆಂದು ಅಂದಾಜಿಸಲಾಗಿದ್ದು, ಇದರಲ್ಲಿ 536 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿ ಅಭಿವೃದ್ಧಿದಾರರಿಗೆ ಹಸ್ತಾಂತರಿಸಲಾಗಿದೆ. ಈ ಮಧ್ಯೆ ಈ ಯೋಜನೆಯ ಕಾರ್ಯ ಸಾಧ್ಯತೆಯನ್ನು ಪರಿಶೀಲಿಸಲು ವಿಸ್ತೃತ ಯೋಜನಾ ವರದಿ, ಕಾರ್ಯ ಸಾಧ್ಯತಾ ಅಧ್ಯಯನ ಹಾಗೂ ಸಂಚಾರ ಅಧ್ಯಯನವನ್ನು ಕೈಗೊಂಡು ಇವುಗಳ ಆಧಾರದ ಮೇಲೆ ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದ್ದ 960 ಎಕರೆ ಜಮೀನಿನ ಬದಲಾಗಿ ಜಮೀನಿನ ಅಗತ್ಯತೆಯನ್ನು 758 ಎಕರೆಗೆ ಇಳಿಸಲಾಗಿದೆ.

- ಕಡಿತಗೊಳಿಸಿದ ಜಮೀನಿಗೆ ಅನುಗುಣವಾಗಿ ಆರ್ಥಿಕ ಕಾರ್ಯಸಾಧ್ಯತೆಯನ್ನು ಆಧರಿಸಿ ಪರಿಷ್ಕೃತ ವಿಸ್ತೃತ ಯೋಜನಾ ವರದಿ ಮತ್ತು ಮಾಸ್ಟರ್ ಪ್ಲಾನ್‌ಅನ್ನು ಅಭಿವೃದ್ಧಿದಾರು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ.

- 222 ಎಕರೆ ಜಮೀನಿಗೆ ಗಡಿ ಗುರುತಿಸಿ ಜಂಟಿ ಅಳತೆ ಕಾರ್ಯವನ್ನು ಕೆ.ಐ.ಎ.ಡಿ.ಬಿ. ಹಾಗೂ ಅಭಿವೃದ್ಧಿದಾರರು ಪೂರೈಸಿರುತ್ತಾರೆ.

- ಈ ಯೋಜನೆಗೆ ಸಂಬಂಧಪಟ್ಟಂತೆ ಅಭಿವೃದ್ಧಿದಾರರ ಬ್ಯಾಂಕಿನಿಂದ ಬದ್ಧತೆ ಕಾರ್ಯಸಾಧ್ಯತೆ ಬಗ್ಗೆ ಪತ್ರವನ್ನು ಪಡೆದು ಸಲ್ಲಿಸುವಂತೆ ದಿ : 17.02.2012 ರಂದು ನಡೆದ ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿಯ ಪರಿವೀಕ್ಷಣೆಯ ಸಭೆಯಲ್ಲಿ ಹಾಸನ ವಿಮಾನ ನಿಲ್ದಾಣದ ಅಭಿವೃದ್ಧಿದಾರರ ಪ್ರತಿನಿಧಿಗಳಿಗೆ ತಿಳಿಸಲಾಗಿದೆ. ಅಭಿವೃದ್ಧಿದಾರರಿಂದ ಮುಂದಿನ ಕ್ರಮ ನಿರೀಕ್ಷಿಸಿದೆ. ಸಂಖ್ಯೆ : ಮೂಅಇ 33 ರಾಅವಿ 2012

ಕಲ್ಲಿನ ಗಣಿಗಾರಿಕೆಯ ಕಾರ್ಮಿಕರಿಗೆ ತೊಂದರೆ

53 : (185)

ಡಾ: ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ / ಚಿತ್ತಾಪುರ ಹಾಗೂ ಚಿಂಚೋಳಿ ತಾಲ್ಲೂಕಿನ ಶಹಾಬಾದ ಕಲ್ಲಿನ ಗಣಿಗಾರಿಕೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಶಹಾಬಾದ ಕಲ್ಲಿನ ಶುದ್ಧ ಹಾಗೂ ಲಾಟ್ರೇಟ್‌ಗಳಿಗೆ ಭೂ ಪರಿವರ್ತನೆಯಿಂದ ವಿನಾಯಿತಿ ನೀಡಿ ಭೂಕಂದಾಯ ಅಧಿನಿಯಮ 1964ರ ಕಲಂ 95(2) ಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ತಿದ್ದುಪಡಿ ತರಲಾಗುವುದು?